## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ 2020-21ನೇ ಸಾಲಿನ ಮುಂದುವರೆದ ಹಾಗೂ 2021-22ನೇ ಸಾಲಿನ ಕಾರ್ಯಕ್ರಮಗಳ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**

ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಇವರ ಪತ್ರ ಸಂಖ್ಯೆ: ಕಅಪ್ರಾ/ಕಾ1/01/2021-22/06, ದಿನಾಂಕ: 16.04.2021.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ 2021-22ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ರೂ.200.00 ಲಕ್ಷಗಳ ಅನುದಾನವನ್ನು ಮೀಸಲಿರಿಸಲಾಗಿದ್ದು, ಹಾಗೂ 2020-21ನೇ ಸಾಲಿನ ಪ್ರಾಧಿಕಾರದ ಮುಂದುವರೆದ ಕಾರ್ಯಕ್ರಮಗಳು ಹಾಗೂ ಕಾರ್ಯಚಟುವಟಿಕೆಗಳು ಅನುಷ್ಠಾನವಾಗದೆ ಉಳಿಕೆಯಾಗಿರುವ ರೂ. 325.62 ಲಕ್ಷಗಳು ಹೀಗೆ ಒಟ್ಟು ರೂ. 525.62 ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ಅನುಮೋದಿಸುವಂತೆ ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಇವರು ಕೋರಿರುತ್ತಾರೆ.

ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಸಂವಾ 67 ಕೆಬಿಎಲ್-ಆಕ 2021**
**ಬೆಂಗಳೂರು, ದಿನಾಂಕ: 29.05.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಕ್ರಮಗಳು / ಯೋಜನೆಗಳ ಅನುಷ್ಠಾನಕ್ಕಾಗಿ 2021-22ನೇ ಸಾಲಿನ ಆಯವ್ಯಯದಲ್ಲಿ ಮೀಸಲಾಗಿರುವ ಅನುದಾನ ರೂ. 200.00 ಲಕ್ಷಗಳು ಹಾಗೂ 2020-21ನೇ ಸಾಲಿನಲ್ಲಿ ಬಾಕಿ ಉಳಿದಿರುವ ಮೊತ್ತ ರೂ. 325.62 ಲಕ್ಷಗಳು ಸೇರಿದಂತೆ ಒಟ್ಟು ರೂ. 525.62 (ಐದುನೂರ ಇಪ್ಪತ್ತೈದು ಲಕ್ಷಗಳ ಅರವತ್ತೆರಡು ಸಾವಿರಗಳು)ಲಕ್ಷಗಳನ್ನು ಆಯವ್ಯಯದಲ್ಲಿ ನಿಗದಿಪಡಿಸಿರುವ ಅನುದಾನಕ್ಕನುಗುಣವಾಗಿ ಅನುಬಂಧದಲ್ಲಿ ಲಗತ್ತಿಸಿರುವಂತೆ ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ.

**ಷರತ್ತುಗಳು**

1. 2021-22ನೇ ಸಾಲಿನಲ್ಲಿ ಅನುಮೋದನೆಯಾದ ಹೊಸದಾಗಿ ಮಂಜೂರಾದ ಯೋಜನಾ ಕಾರ್ಯಕ್ರಮಗಳನ್ನು ಹಾಗೂ ಮುಂದುವರೆದ ಯೋಜನಾ ಕಾರ್ಯಕ್ರಮಗಳನ್ನು ಮಾತ್ರ ಮುಂದುವರೆಸತಕ್ಕದ್ದು.
2. ಮುಂದುವರೆದ ಯೋಜನಾ ಕಾರ್ಯಕ್ರಮಗಳಲ್ಲಿ ಯಾವುದೇ ಹೊಸ ಘಟಕಗಳು ಅಥವಾ ಹೊಸ ಯೋಜನೆಗಳು ಒಳಗೊಂಡಿದ್ದಲ್ಲಿ ಅವುಗಳಿಗೆ ಪ್ರತ್ಯೇಕವಾದ ಪ್ರಸ್ತಾವನೆಗಳನ್ನು ಸಲ್ಲಿಸಿ ನಿಯಮಾನುಸಾರ ಮಂಜೂರಾತಿ ಪಡೆಯತಕ್ಕದ್ದು.
3. ಹೊಸ ಸಂಸ್ಥೆಗಳಿಗೆ ಅಥವಾ ಅದೇ ಯೋಜನೆಯ ಹೊಸ ಪ್ರಕರಣಗಳಲ್ಲಿ ಒಳಗೊಂಡಿರುವ ಕೆಲಸಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಸಾಲ ಬಂಡವಾಳ ವೆಚ್ಚ, ಸಹಾಯಧನ / ಸೋಡಿ ಮುಂತಾದವುಗಳ ಮಂಜೂರಾತಿ ಇವು ಆಯಾಯ ಬಾಬ್ತುಗಳಿಗೆ ಸಂಬಂಧಿಸಿದ ಪ್ರತ್ಯಾಯೋಜಿತ ಅಧಿಕಾರಗಳ ಪರಿಮಿತಿಯಲ್ಲಿರತಕ್ಕದ್ದು.
4. ಆರ್ಥಿಕ ಇಲಾಖೆಯ ಮಿತವ್ಯಯ ಆದೇಶಗಳಿಗೆ ಒಳಪಡುವ ಸಿಬ್ಬಂದಿ ಸೃಜನೆ, ವಾಹನ ಮತ್ತು ಯಂತ್ರ ಸಾಮಾಗ್ರಿ ಖರೀದಿ, ಹೊಸ ಕಛೇರಿ ತೆರೆಯುವುದು, ಹೊಸ ಯೋಜನೆಗಳಿಗೆ ಮಂಜೂರಾತಿ, ಇವುಗಳಿಗೆ ಪ್ರತ್ಯೇಕವಾಗಿ ಆರ್ಥಿಕ ಇಲಾಖೆಯ ಹಾಗೂ ಯೋಜನಾ ಇಲಾಖೆಯ ಅನುಮೋದನೆಯನ್ನು ಪಡೆಯಲು ಪ್ರಸ್ತಾವನೆಗಳನ್ನು ಸಲ್ಲಿಸತಕ್ಕದ್ದು.
5. ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಜವಾಬ್ದಾರರಾದ ಅಧಿಕಾರಿಗಳು ಅವರಿಗೆ ನೀಡಲಾದ ಆರ್ಥಿಕ ಅಧಿಕಾರಕ್ಕೆ ಒಳಪಟ್ಟು ಯೋಜನಾ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರತಕ್ಕದ್ದು.

....2

6. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2021, ದಿನಾಂಕ: 05.04.2021ರಲ್ಲಿ 2021-22ನೇ ಸಾಲಿನ ಆಯವ್ಯಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಯೋಜನೆಗಳಿಗೆ ಎದುರಾಗಿ ಒದಗಿಸಿರುವ ಅನುದಾನವನ್ನು ಸರ್ಕಾರದಿಂದ ಪ್ರತ್ಯಾಯೋಜಿಸಿ ಮಾಡಿರುವ ಯೋಜನೆಗಳ ಎದುರಾಗಿ ನವೆಂಬರ್ 2021ರವರಗೆ ಪರಿಷ್ಕೃತ ಅಂದಾಜಿನ ಅರ್ಧದಷ್ಟು ಮೊತ್ತವನ್ನು ಮಾತ್ರ ಬಳಸಿಕೊಳ್ಳತಕ್ಕದ್ದು.
7. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2021, ದಿನಾಂಕ: 05.04.2021ರಲ್ಲಿ ವೇತನಕ್ಕೆ ಸಂಬಂಧಿಸಿದಂತೆ ಏಪ್ರಿಲ್, ಮೇ ತಿಂಗಳಿಗೆ ಬಿಡುಗಡೆ ಮಾಡಿರುವುದು ಸೇರಿದಂತೆ ಆಯವ್ಯಯದ 8/12 ಭಾಗದಷ್ಟು ಮೊತ್ತವನ್ನು ಮಾತ್ರ ಬಿಡುಗಡೆ ಮಾಡಬಹುದಾಗಿದೆ. ಇದರಲ್ಲಿ ಈಗಾಗಲೇ ಬಿಡುಗಡೆ ಮಾಡಲಾಗಿರುವ ಮೊತ್ತವನ್ನ ಹೊರತುಪಡಿಸಿ ಉಳಿದಿರುವ ಮೊತ್ತವನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡಬಹುದಾಗಿದೆ. ಈ ಸೂಚನೆ ಹೆಚ್.ಆರ್.ಎಂ.ಎಸ್. ನಿಂದ ಹೊರಗೆ ವೇತನ ಸೆಳೆಯುವ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ. ಹೆಚ್.ಆರ್.ಎಂ.ಎಸ್. ಹೊರಗೆ ವೇತನ ಸೆಳೆಯುತ್ತಿರುವ ಸಹಾಯನುದಾನ ಸಂಸ್ಥೆಗಳಿಗೆ ಆಯವ್ಯಯವನ್ನು ಪರಿಷ್ಕರಿಸಿರುವುದರಿಂದ ಪರಿಷ್ಕೃತ ಆಯವ್ಯಯದಲ್ಲಿ ನವೆಂಬರ್ ತಿಂಗಳುವರೆಗೆ ಪ್ರತಿ ತಿಂಗಳು 1/12ರಂತೆ ಬಿಡುಗಡೆ ಮಾಡುವುದು.
8. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2021, ದಿನಾಂಕ: 05.04.2021ರಲ್ಲಿ ಯಾವುದೇ ಹೊಸ ಯೋಜನೆ / ಕಾರ್ಯಕ್ರಮ / ಕಾಮಗಾರಿ ಕೈಗೊಳ್ಳುವ ಮುನ್ನ ಆರ್ಥಿಕ ಇಲಾಖೆಯ ಸಹಮತಿಯನ್ನು ಕಡ್ಡಾಯವಾಗಿ ಪಡಯಬೇಕೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.
9. 1999ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಹಾಗೂ ಅದರ ನಿಯಮಗಳು 2000 ಅನ್ನು ಕಡ್ಡಾಯವಾಗಿ ಪಾಲಿಸುವುದು.
10. ಈ ಸಂಬಂಧ ಇಲಾಖೆಯಿಂದ ಹೊರಡಿಸಲಾಗಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2021, ದಿನಾಂಕ: 05.04.2021ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಹೆಚ್.ಕೆ. ಸುರೇಶಬಾಬು)**
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಆಡಳಿತ ಕನ್ನಡ)

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ), (ಇ&ಐಎಸ್‌ಎಸ್‌ಎ), (ಎ&ಇ), ಕರ್ನಾಟಕ, ಬೆಂಗಳೂರು-560 001.
2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.
3. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ. ಗೋಪುರ, ಬೆಂಗಳೂರು.
4. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.
5. ಮಾನ್ಯ ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
6. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ,
7. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಶಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ.
8. ನಿರ್ದೇಶಕರು ಜನಶಕ್ತಿ ಮತ್ತು ಉದ್ಯೋಗ ವಿಭಾಗ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ,
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿ ಇಲಾಖೆ (ವೆಚ್ಚ-7), ವಿಧಾನಸೌಧ.
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 67 ಕೆಬಿಎಲ್-ಆಕ 2021, ದಿನಾಂಕ: 29 .05.2021ಕ್ಕೆ ಅನುಬಂಧ**

**2021-22ನೇ ಸಾಲಿನ ಮುಂದುವರೆದ ಕಾರ್ಯಕ್ರಮಗಳ ಕ್ರಿಯಾಯೋಜನೆ**

(ಲೆಕ್ಕ ಶೀರ್ಷಿಕೆ – 2205-00-102-1-81-059)

| ಕ್ರ.ಸಂ | ಯೋಜನಾ ಕಾರ್ಯಕ್ರಮಗಳ ಹೆಸರು/ವಿವರ | 2021-22ನೇ ಸಾಲಿನ ಆಯವ್ಯಯ (ರೂ. ಲಕ್ಷಗಳಲ್ಲಿ) |
|---|---|---|
| | 2021-22ನೇ ಸಾಲಿಗೆ ಲೆಕ್ಕ ಶೀರ್ಷಿಕೆ -2205-00-102-1-81-059 ರಡಿಯಲ್ಲಿ ಸರ್ಕಾರದಿಂದ ಒದಗಿಸಲಾಗಿರುವ ರೂ. 200.00 ಲಕ್ಷಗಳಿಗೆ ಹಾಗೂ 2020-21ನೇ ಸಾಲಿನ ಅನುಷ್ಠಾನಕ್ಕೆ ಬಾಕಿ ಇರುವ ಮುಂದುವರೆದ ಕಾರ್ಯಕ್ರಮಗಳ ಮೊತ್ತ ರೂ.180.96 ಲಕ್ಷಗಳು ಹಾಗೂ 2020-21ನೇ ಸಾಲಿನ ಶೀರ್ಷಿಕೆವಾರು ಸ್ವೀಕೃತಿ ಹಾಗೂ ಉಳಿಕೆ ಮೊತ್ತ ರೂ. 123.79 ಲಕ್ಷಗಳು ಹಾಗೂ ಇತರೆ ಸ್ವೀಕೃತಿ/ಉಳಿಕೆ ಶೀಲ್ಕು ರೂ. 20.87 ಲಕ್ಷಗಳು ಸೇರಿ ರೂ. 144.66 ಲಕ್ಷಗಳು ಒಟ್ಟು ರೂ. 525.62 ಲಕ್ಷಗಳಿಗೆ ( ರೂ. ಐದು ನೂರ ಇಪ್ಪತ್ತೊಂದು ಲಕ್ಷದ ಅರವತ್ತೆರಡು ಸಾವಿರ) ಪೂರಕವಾಗಿ ಪ್ರಸ್ತಾಪಿಸಿರುವ ಕಾರ್ಯಕ್ರಗಳ ವಿವರ | |
| 1 | **2020-21ನೇ ಸಾಲಿನ ಅನುಷ್ಠಾನಕ್ಕೆ ಬಾಕಿ ಇರುವ ಮುಂದುವರೆದ ಕಾರ್ಯಕ್ರಮಗಳು:**<br>**ಅ) ಕನ್ನಡ ಮಾಧ್ಯಮ ಪ್ರಶಸ್ತಿ ಕಾರ್ಯಕ್ರಮ:** ಹೊರರಾಜ್ಯಗಳಾದ ಮಹಾರಾಷ್ಟ್ರ, ಕೇರಳ, ಗೋವಾ, ತಮಿಳುನಾಡು, ಆಂಧ್ರಪ್ರದೇಶ ಹಾಗೂ ತೆಲಗಾಂಣ ರಾಜ್ಯಗಳಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ. ತರಗತಿಗಳನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ಅತಿ ಹೆಚ್ಚು ಅಂಕಗಳಿಸಿದ ಪ್ರತಿ ಶಾಲಾ ಮಟ್ಟದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಗಳಿಸಿದ ಹಿಂದಿನ ವರ್ಷದ ಸುಮಾರು 600 ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮ ಪ್ರಶಸ್ತಿ ನೀಡಿ ಪುರಸ್ಕರಿಸುವ ಕಾರ್ಯಕ್ರಮ.<br>**ಆ) ರಾಜ್ಯದ 2020-21ನೇ ಸಾಲಿನ ಕನ್ನಡ ಮಾಧ್ಯಮ ಪ್ರಶಸ್ತಿ:** ಬಾಕಿಯಿರುವ ನಗದು ಬಹುಮಾನ ಮೊತ್ತ ಪಾವತಿ.<br>**ಇ) 2020-21ನೇ ಸಾಲಿನ ಹೊರರಾಜ್ಯ ಕನ್ನಡ ಎಂ.ಎ. ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಕಾರ್ಯಕ್ರಮ:**<br>ಹೊರರಾಜ್ಯದ 9 ವಿಶ್ವವಿದ್ಯಾನಿಲಯಗಳ ಕನ್ನಡ ಅಧ್ಯಯನ ಕೇಂದ್ರಗಳಲ್ಲಿ ಕನ್ನಡದಲ್ಲಿ ಎಂ.ಎ. ವ್ಯಾಸಂಗ ಮಾಡುತ್ತಿರುವ ಹಿಂದಿನ ವರ್ಷದ ಸುಮಾರು 150 ವಿದ್ಯಾರ್ಥಿಗಳಿಗೆ ವಾರ್ಷಿಕ ವಿದ್ಯಾರ್ಥಿವೇತನ ಹಾಗೂ ಆರ್ಥಿಕ ಸಹಕಾರ ನೀಡಿ ಪ್ರೋತ್ಸಾಹಿಸುವ ಕಾರ್ಯಕ್ರಮ (ರೂ. 37.50 ಲಕ್ಷಗಳು)<br>**ಈ) 2020-21ನೇ ಸಾಲಿನ ನ್ಯಾಯಾಂಗದಲ್ಲಿ ಕನ್ನಡ ಕಾರ್ಯಕ್ರಮ:**<br>ಕನ್ನಡದಲ್ಲಿ ತೀರ್ಪು ನೀಡಿದ ಪ್ರತಿ ಜಿಲ್ಲೆಯ ನ್ಯಾಯಾಧೀಶರು, ಕನ್ನಡದಲ್ಲಿ ವಾದ ಮಂಡಿಸಿದ ಸರ್ಕಾರಿ ಅಭಿಯೋಜನಕರು ಹಾಗೂ ವಕೀಲರುಗಳಿಗೆ ಪ್ರೋತ್ಸಾಹಧನ ನೀಡಿ ಗೌರವಿಸುವ ಕಾರ್ಯಕ್ರಮ (ಅನುಷ್ಠಾನಕ್ಕೆ ಬಾಕಿಯಿರುವ 2019-20 ಮತ್ತು 2020-21ನೇ ಸಾಲಿನ ಎರಡು ವರ್ಷದ ಕಾರ್ಯಕ್ರಮ) (ರೂ. 20.00 ಲಕ್ಷಗಳು) | **180.96** |
| 2 | **ಆಡಳಿತದಲ್ಲಿ ಕನ್ನಡ:-**<br>ಅ) ಪ್ರಾಧಿಕಾರದ ಅಧ್ಯಕ್ಷರ / ಅಧ್ಯಕ್ಷರ ಕಛೇರಿಯ ಅಧಿಕಾರಿಗಳು / ಸಿಬ್ಬಂದಿಯ ವೇತನ ಪ್ರವಾಸ ಭತ್ಯೆ ಹಾಗೂ ಇನ್ನಿತರೆ ಭತ್ಯೆಗಳು<br>ಆ) ಕನ್ನಡ ಅನುಷ್ಠಾನ / ಮೇಲುಸ್ತುವಾರಿ ಹಾಗೂ ಪ್ರಗತಿ ಪರಿಶೀಲನೆಗಾಗಿ ತಗಲುವ ಅಧ್ಯಕ್ಷರ / ಸದಸ್ಯರ / ಅಧಿಕಾರಿಗಳ / ಕಛೇರಿ ಸಿಬ್ಬಂದಿಗಳ ಪ್ರಯಾಣ ವೆಚ್ಚ<br>ಇ) ಪ್ರಾಧಿಕಾರದ ವಾಹನಗಳ ಇಂಧನ, ರಿಪೇರಿ ವೆಚ್ಚ/ ಕನ್ನಡ ಅನುಷ್ಠಾನ ಕಾರ್ಯಕ್ರಮಗಳ ವೀಕ್ಷಣೆಗಾಗಿ / ಗಣ್ಯರ ಆಹ್ವಾನದ ಸಂದರ್ಭದಲ್ಲಿ ಬಾಡಿಗೆ ವಾಹನದ ವೆಚ್ಚ.<br>ಈ) ಇತರೆ ವೆಚ್ಚಗಳು: ಸೇವಾ ಅಂಚೆ ಚೀಟಿ / ಕೋರಿಯರ್ ವೆಚ್ಚ, ಪ್ರಾಧಿಕಾರದ ವತಿಯಿಂದ ಆಯೋಜಿಸಲಾಗುವ ಸಭೆ ಆಯೋಜನಾ ವೆಚ್ಚಗಳು, ಕಛೇರಿ ನಿರ್ವಹಣೆ ಕುರಿತಾದ ಸಾದಿಲ್ವಾರು ವೆಚ್ಚಗಳು.<br>ಉ) ಹೊರ ದೇಶಗಳಲ್ಲಿ ಅನಿವಾಸಿ ಕನ್ನಡಿಗರ ಜೊತೆ ಸಮಾವೇಶ ಕಾರ್ಯಕ್ರಮಕ್ಕೆ ಪ್ರಾಧಿಕಾರದ ಅಧ್ಯಕ್ಷರು / ಅಧಿಕಾರಿಗಳು ಮತ್ತು ಪ್ರಾಧಿಕಾರ ಅನುಮೋದಿಸುವ ಎಲ್ಲಾ ಪ್ರತಿನಿಧಿಗಳಿಗೆ ತಗಲುವ ಪ್ರವಾಸ ವೆಚ್ಚ. | **110.00** |

| | | |
|---|---|---|
| | ಊ) ಆಡಳಿತದಲ್ಲಿ ಕನ್ನಡ ತರಬೇತಿ ಕಾರ್ಯಕ್ರಮ / ಗೋಷ್ಠಿ/ ವಿಚಾರ ಸಂಕಿರಣಗಳಿಗಾಗಿ ವೆಚ್ಚ/ ವಿಶೇಷ ಪದಕೋಶಗಳ ಮುದ್ರಣ / ಪ್ರಾಧಿಕಾರದ ಪುಸ್ತಕ ಮುದ್ರಣ / ಕಾನೂನುತಜ್ಞರು / ಭಾಷಾತಜ್ಞರು / ಶಿಕ್ಷಣ ತಜ್ಞರು / ವಿಷಯ ತಜ್ಞರು / ಸಂಘಟನಕಾರರು / ಸಾಂಸ್ಕೃತಿಕ ನಿರ್ವಾಹಕರು / ಗಣ್ಯರು ಇವರ ಸೇವೆಯನ್ನು ಪ್ರಾಧಿಕಾರದ ಕಾರ್ಯಾಲಯಗಳಲ್ಲಿ ಬಳಸಿಕೊಳ್ಳಲು ಬೇಕಾಗುವ ಸಂಭಾವನೆ / ಭತ್ಯೆ (ಪ್ರಯಾಣ ಮತ್ತು ದಿನಭತ್ಯೆ)ಯನ್ನು ನೀಡುವ ಸಂಬಂಧ ವೆಚ್ಚ. | |
| 3 | **ಕನ್ನಡ ಅಭಿವೃದ್ಧಿ ಕಾರ್ಯಕ್ರಮಗಳು:**<br>ಅ) ರಾಜ್ಯದಲ್ಲಿನ ಸರ್ಕಾರಿ / ಸರ್ಕಾರೇತರ ಕ್ರಿಯಾಶೀಲ ಸಂಸ್ಥೆಗಳು ಸೇರಿದಂತೆ ಸಾರ್ವಜನಿಕ ಉದ್ದಿಮೆ / ಖಾಸಗಿ ವಲಯದ ಕಾರ್ಖಾನೆಗಳಲ್ಲಿ ಕನ್ನಡ ಸಂಘಟನೆಗಳನ್ನು ಪ್ರೋತ್ಸಾಹಿಸಿ ನಿರಂತರ ಕಾರ್ಯಕ್ರಮಗಳನ್ನು ರೂಪಿಸುವ ಸಲುವಾಗಿ ಅಂದರೆ ಬೆಂಗಳೂರಿನಲ್ಲಿ ವಾಸವಾಗಿರುವ ಕನ್ನಡೇತರರಿಗೆ ಕನ್ನಡ ಕಲಿಸುವ ಸಲುವಾಗಿ ಬಿ.ಬಿ.ಎಂ.ಪಿ.ಯ ಎಲ್ಲಾ ವಾರ್ಡುಗಳಲ್ಲಿ ಬಿ.ಬಿ.ಎಂ.ಪಿ. ಸದಸ್ಯರು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಎಲ್ಲಾ ಅಪಾರ್ಟ್ ಮೆಂಟುಗಳಲ್ಲಿ ವಾಸಿಸುವ ಅನ್ಯ ಭಾಷಿಕರಿಗೆ ಕನ್ನಡ ಕಲಿಕಾ ಕೇಂದ್ರಗಳನ್ನು ತೆರೆಯಲು ಆರ್ಥಿಕ ನೆರವು ಹಾಗೂ ಕನ್ನಡ ಸಂಸ್ಕೃತಿ ಉತ್ಸವ/ ಕನ್ನಡ ಸಂಸ್ಕೃತಿ ಶಿಬಿರ / ಭಾಷಾ ಗೋಷ್ಠಿ / ಸಮಾವೇಶ ಕಾರ್ಯಕ್ರಮಗಳ ವೆಚ್ಚ / ಸಹಾಯಧನ ನೀಡಿಕೆ.<br>ಆ) ಹೊರರಾಜ್ಯ / ವಿದೇಶಗಳಲ್ಲಿರುವ ಕನ್ನಡ ಸಂಘಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಳ್ಳುವ ಕನ್ನಡ ಕಲಿಕಾ ಕೇಂದ್ರ / ಗೋಷ್ಠಿ / ವಿಚಾರ ಸಂಕಿರಣ/ ಸಾಂಸ್ಕೃತಿಕ ಸಂವಾದ / ಕನ್ನಡ ಸಂಸ್ಕೃತಿ ಉತ್ಸವ / ಉಪನ್ಯಾಸಗಳಿಗೆ ವೆಚ್ಚ / ಸಹಾಯಧನ ನೀಡಿಕೆ.<br>ಇ) ಕನ್ನಡ ಅನುಷ್ಠಾನ ಹಾಗೂ ಕನ್ನಡ ಜಾಗೃತಿ ಅಭಿಯಾನ / ಕನ್ನಡ ಕಾಯಕ ವರ್ಷಾಚರಣೆ ಪೂರಕ ಕಾರ್ಯಚಟುವಟಿಕೆಗಳು.<br>ಈ) ಕನ್ನಡ ಕಡ್ಡಾಯ ಭಾಷಾ ಕಲಿಕಾ ಅಧಿನಿಯಮ ಅನುಷ್ಠಾನದ ಬಗ್ಗೆ ಪೂರಕ ಕ್ರಮಗಳು / ಕನ್ನಡ ಮಾಧ್ಯಮ ಶಿಕ್ಷಣವನ್ನು ಮುಂದುವರೆಸಲು ಪೂರಕ ಕ್ರಮಗಳು. | **124.66** |
| 4 | **ಕನ್ನಡ ಸಂಸ್ಕೃತಿ ಕಾರ್ಯಕ್ರಮ:**<br>ಅ) ರಾಜ್ಯದ ಗಡಿಭಾಗ / ಹೊರರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ಕ್ರಿಯಾಶೀಲ ಸರ್ಕಾರೇತರ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕನ್ನಡ ಜಾಗೃತಿ ಸಮಾವೇಶ / ಬಹು ಭಾಷಾ ಭಾವೈಕ್ಯ ಸಮಾವೇಶ / ಉಪನ್ಯಾಸ / ಕಮ್ಮಟ / ಗೋಷ್ಠಿ / ಹಳೆಗನ್ನಡ ಕಾವ್ಯ – ವ್ಯಾಖ್ಯಾನ (ರಸಗ್ರಹಣ) / ಸಾಂಸ್ಕೃತಿಕ ಉತ್ಸವಗಳಿಗಾಗಿ ವೆಚ್ಚ / ಸಹಾಯಧನ ನೀಡಿಕೆ / ಪ್ರಾಧಿಕಾರದ ಸಹಯೋಗದೊಂದಿಗೆ ಹಮ್ಮಿಕೊಳ್ಳುವ ಕನ್ನಡ ಚಿಂತನ ಕಾರ್ಯಕ್ರಮಗಳಿಗೆ ಸಹಾಯಧನ ನೀಡಿಕೆ.<br>ಆ) ಪ್ರಾಧಿಕಾರದ ವತಿಯಿಂದ ಹೊರರಾಜ್ಯ / ವಿದೇಶಗಳಲ್ಲಿರುವ ಕನ್ನಡ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಳ್ಳುವ ಕನ್ನಡ ಜಾಗೃತಿ ಸಮಾವೇಶ / ಕನ್ನಡ ಕಲಿಕಾ ಕೇಂದ್ರ / ಗೋಷ್ಠಿ / ವಿಚಾರ ಸಂಕಿರಣ / ಸಾಂಸ್ಕೃತಿಕ ಸಂವಾದ / ಕನ್ನಡ ಸಂಸ್ಕೃತಿ ಉತ್ಸವ / ಉಪನ್ಯಾಸಗಳಿಗೆ ವೆಚ್ಚ / ಸಹಾಯಧನ ನೀಡಿಕೆ.<br>ಇ) ಕನ್ನಡ ಗಣಕಯಂತ್ರ / ಕನ್ನಡ ತಂತ್ರಾಂಶ / ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡ ಭಾಷೆ ಬೆಳವಣಿಗೆಗೆ ಪೂರಕ ಕಾರ್ಯಕ್ರಮಗಳು / ಕನ್ನಡ ತಂತ್ರಾಂಶ ಅಭಿವೃದ್ಧಿ ಕಾರ್ಯಕ್ರಮಗಳು. | **50.00** |
| 5 | **ಅ) ಹೊರ ವಿ.ವಿ. ವಿದ್ಯಾರ್ಥಿ ವೇತನ ಹಾಗೂ ಇತರೆ ಕಾರ್ಯಕ್ರಮಗಳು:**<br>ಹೊರರಾಜ್ಯಗಳ ವಿಶ್ವವಿದ್ಯಾಲಯಗಳ 9 ಕನ್ನಡ ಅಧ್ಯಯನ ಕೇಂದ್ರ / ಪೀಠಗಳಲ್ಲಿ ಕನ್ನಡದಲ್ಲಿ ಎಂ.ಎ. ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ.<br>**ಆ) ಪೀಠೋಪಕರಣ ಹಾಗೂ ಪಾಠೋಪಕರಣ:-**<br>ರಾಜ್ಯದಲ್ಲಿನ / ಗಡಿ ಭಾಗದಲ್ಲಿನ ಹಾಗೂ ಹೊರರಾಜ್ಯದಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳ / ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಪೀಠೋಪಕರಣ/ ಪಾಠೋಪಕರಣಗಳ ಖರೀದಿ / ಸ್ಮಾರ್ಟ್ ಕ್ಲಾಸ್ ಸೌಲಭ್ಯ / ಗಡಿ ಭಾಗದ / ಹೊರನಾಡಿನ ಕನ್ನಡ ಶಾಲೆಗಳಿಗೆ ಕನ್ನಡ ತಂತ್ರಾಂಶ ಒಳಗೊಂಡ ಕಂಪ್ಯೂಟರ್, ಪ್ರೊಜೆಕ್ಟರ್ ಹಾಗೂ ಎಲ್.ಇ.ಡಿ. ಸ್ಕ್ರೀನ್‌ಗಳನ್ನು ಒದಗಿಸಲು ಪ್ರಾಧಿಕಾರದ ಸಹಾಯಧನ ನೀಡಿಕೆ. | **60.00** |
| | **ಒಟ್ಟು** | **525.62** |

| ಯೋಜನೇತರ | | |
|---|---|---|
| ಕ್ರ ಸಂ | ಲೆಕ್ಕಶೀರ್ಷಿಕೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | **ಲೆಕ್ಕಶೀರ್ಷಿಕೆ: 2052-00-092-0-09-101** (ಹಿಂದಿನ ವರ್ಷದ ಬಾಕಿ ರೂ. 3.50 ಲಕ್ಷ ಹಾಗೂ ಪ್ರಸಕ್ತ ಸಾಲಿನ ಹಂಚಿಕೆ ರೂ. 43.00 ಲಕ್ಷ) | 46.50 |
| 2 | **ಲೆಕ್ಕಶೀರ್ಷಿಕೆ: 2052-00-092-0-09-103** (ಪ್ರಸಕ್ತ ಸಾಲಿನ ಹಂಚಿಕೆ) | 10.00 |
| 3 | **ಲೆಕ್ಕಶೀರ್ಷಿಕೆ: 2052-00-092-0-09-115** (ಹಿಂದಿನ ವರ್ಷದ ಬಾಕಿ ರೂ. 11.50 ಲಕ್ಷ ಹಾಗೂ ಪ್ರಸಕ್ತ ಸಾಲಿನ ಹಂಚಿಕೆ ರೂ. 27.00 ಲಕ್ಷ) | 38.50 |
| | **ಒಟ್ಟು** | **95.00** |

**(ಹೆಚ್.ಕೆ. ಸುರೇಶಬಾಬು)**
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
(ಆಡಳಿತ ಕನ್ನಡ)